# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.**

ಸಂಖ್ಯೆ: ಇ2/ಡಿ.ಸಿ.ಬಿಲ್ 3/2018-19 ದಿನಾಂಕ: 19-03-2019

## ಜ್ಞಾಪನಾ

ವಿಷಯ: ಮಾರ್ಚ್-ಏಪ್ರಿಲ್ 2019ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ಪರೀಕ್ಷಾ ಕೇಂದ್ರಗಳಿಗೆ ಸಾದಿಲ್ವಾರು ಮತ್ತು ಸಂಭಾವನೆ ಪೂರ್ಣ ಹಣವನ್ನು ನೆಫ್ಟ್ ಮುಖಾಂತರ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ:ಎ8/ಪ.ಶುಲ್ಕ.ಪರಿಷ್ಕರಣೆ 34/2017-18 ದಿ:15.3.2018

*****

ಮಾರ್ಚ್-ಏಪ್ರಿಲ್ 2019ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯನ್ನು ನಡೆಸಲು ಪರೀಕ್ಷಾ ಕೇಂದ್ರಕ್ಕೆ ಸಾದಿಲ್ವಾರು ಹಾಗೂ ಸಂಭಾವನೆಯ ಪೂರ್ಣ ಹಣದ ಮೊತ್ತ ರೂ____________ನ್ನು ಮುಖ್ಯ ಅಧೀಕ್ಷಕರ ಉಳಿತಾಯ ಖಾತೆ ಸಂಖ್ಯೆ: ಗೆ ____________ ದಿನಾಂಕ 20.03.2019 ರಂದು ನೆಫ್ಟ್ ಮುಖಾಂತರ ಜಮಾ ಮಾಡಲಾಗಿದೆ. ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ಹಾಗೂ ಇದು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಹಣವಾಗಿರುವುದರಿಂದ, ಮಂಡಳಿಯ ನಿಯಮಾವಳಿ ಪ್ರಕಾರ ಕ್ರಮಬದ್ಧವಾಗಿ ಹಣವನ್ನು ಮಿತವಾಗಿ ಖರ್ಚು ಮಾಡಲು ತಿಳಿಸಿದೆ. ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳ ಸಂಖ್ಯೆಯನ್ನಾಧರಿಸಿ, ಸಂಭಾವನೆ ಮತ್ತು ಸಾದಿಲ್ವಾರು ಪೂರ್ತಿ ಹಣ ಬಿಡುಗಡೆ ಮಾಡಿದ್ದು, **ಹೆಚ್ಚುವರಿ ಕ್ಲೇಮ್‌ಗೆ ಅವಕಾಶವಿರುವುದಿಲ್ಲ**. ಪರೀಕ್ಷಾ ವೆಚ್ಚದ ನಂತರ ಉಳಿಕೆ ಇದ್ದಲ್ಲಿ ಮಂಡಳಿಗೆ NEFT ಮೂಲಕ ವರ್ಗಾಯಿಸಿ, ಚಲನ್‌ನ್ನು **ಲೆಕ್ಕಾಧಿಕಾರಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ,ಬೆಂಗಳೂರು** ಇವರಿಗೆ ಸಲ್ಲಿಸಲು ತಿಳಿಸಿದೆ. [ಚಲನ್‌ನ ಅಕೌಂಟ್ ನಂಬರ್ ಕಾಲಂನಲ್ಲಿ ಸೊನ್ನೆಗಳನ್ನು ನಮೂದಿಸಿ ಕೊನೆಯ 17 ಮತ್ತು 18ರ ಕಾಲಂನಲ್ಲಿ ಎಸ್-16 ಎಂದು ನಮೂದಿಸುವುದು]

ಅನಿವಾರ್ಯ ಸಂದರ್ಭಗಳಲ್ಲಿ ನಮೂದಿಸಿರುವ ಹೆಸರಿನ ಮುಖ್ಯ ಅಧೀಕ್ಷಕರು ಬದಲಾವಣೆಯಾಗಿದ್ದಲ್ಲಿ ಅಥವಾ ಪರೀಕ್ಷಾ ಅವಧಿಯ ಮಧ್ಯದಲ್ಲಿ ಮುಖ್ಯ ಅಧೀಕ್ಷಕರ ಬದಲಾವಣೆಯಾದಲ್ಲಿ, ಬದಲೀ ನಿಯೋಜಿತ ಮುಖ್ಯ ಅಧೀಕ್ಷಕರು, ಉಪನಿರ್ದೇಶಕರು ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೀಡಿದ ನೇಮಕಾತಿ ಆದೇಶದೊಂದಿಗೆ ಮಂಡಳಿಯಿಂದ ನೆಫ್ಟ್ ಮುಖಾಂತರ ರವಾನಿಸಿದ ಹಣವನ್ನು ಬದಲಾದ ಮುಖ್ಯ ಅಧೀಕ್ಷಕರಿಗೆ ಹಸ್ತಾಂತರಿಸುವುದು.

## I. ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳು:

1. ಸಾದಿಲ್ವಾರು ಸಾಮಗ್ರಿ ಖರೀದಿಸಿದ ರಸೀದಿ ಹಾಗೂ ಸಾದಿಲ್ವಾರು ವೆಚ್ಚ ರಸೀದಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು. ಅನಗತ್ಯ ವೆಚ್ಚ ಕಂಡುಬಂದಲ್ಲಿ, ಸಂಬಂಧಿಸಿದವರಿಂದ ಹಣ ವಸೂಲು ಮಾಡಲಾಗುವುದು.